ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ 19 ಮೇ 2020 ಸಂಚಿಕೆ 4



ಜೆ.ಕೃಷ್ಣಮೂರ್ತಿ (11 ಮೇ 1895 – 17 ಫೆಬ್ರವರಿ 1986)

"ಈ ಕರ್ಮದ ನಿರಂತರತೆಯನ್ನು ಭಂಗಗೊಳಿಸಲು ಸಾಧ್ಯ ಎಂದು
ನಾನು ಹೇಳುತ್ತೇನೆ – ಆದರೆ, ಜಡವಲ್ಲದ, ಪೂರ್ವನಿರ್ಧರಿತವಲ್ಲದ,
ಜೀವಂತವಿರುವ, ಚಲನೆಯಲ್ಲಿರುವ ಕರ್ಮದ ಕಾರ್ಯಾಚರಣೆಗಳನ್ನು
ನೀವು ಅರ್ಥಮಾಡಿಕೊಂಡಾಗ ಮಾತ್ರ;
ಹಾಗೂ ತನ್ನನ್ನು ಗತದಿಂದ ಬಿಡುಗಡೆಗೊಳಿಸುವುದರಲ್ಲಿ,
ಮನೋ–ಬುದ್ಧಿಯು ಸತ್ಯ ಅಥವಾ ದೇವರು ಏನು ಎಂಬುದನ್ನು ಅರಿಯುತ್ತದೆ."

– ಜೆ. ಕೃಷ್ಣಮೂರ್ತಿ

ಮನಸ್ಸು–ಬುದ್ಧಿಗೆ ಪ್ರಭಾವದಿಂದ ಸ್ವತಂತ್ರವಾಗಿರುವುದು ಸಾಧ್ಯವೇ?

ಮಾನಸಿಕ ವಾಸ್ತವವನ್ನು ಅರ್ಥಮಾಡಿಕೊಳ್ಳಲು ನೀವು ಬಹಿರಂಗದ ಚಲನೆಯನ್ನೂ ಅರ್ಥಮಾಡಿಕೊಳ್ಳಬೇಕು – ಬಹಿರಂಗದ ಅಭಿವ್ಯಕ್ತಿಯ, ವಿನ್ಯಾಸದ, ಬಣ್ಣದ, ರಚನೆಯ, ಕಾರ್ಯದ ಚಲನೆಯನ್ನು. ನೀವು ಬಹಿರಂಗವನ್ನು ಅರ್ಥಮಾಡಿಕೊಳ್ಳದೇ ಅಂತರಂಗವನ್ನು ಅರ್ಥಮಾಡಿಕೊಳ್ಳಲಾರಿರಿ. ಅವೆರಡೂ ಪರಸ್ಪರ ಸಂಬಂಧಿಸಿವೆ. ಹೊರಗಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳದೇ – ಅಂದರೆ, ಸಮಾಜ ಅರ್ಥಾತ್ ಸಂಬಂಧವನ್ನು ಅರ್ಥಮಾಡಿಕೊಳ್ಳದೇ, ನೀವು ಒಳಗಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲಾರಿರಿ. ಇಬ್ಬರ ನಡುವಿನ ಸಂಬಂಧವೇ ಸಮಾಜ. ಮತ್ತು ಆ ಸಂಬಂಧವೇ ಮಹತ್ವಾಕಾಂಕ್ಷೆ, ದುರಾಸೆ, ಅಸೂಯೆ, ನಿರ್ದಯತೆ, ಕ್ರೌರ್ಯ, ಯುದ್ಧ, ಭ್ರಷ್ಟತೆಯಾಗಿರುವ ಸಾಮಾಜಿಕ ರಚನೆಯನ್ನು ಕಟ್ಟಿದೆ – ಅದೇ ಪ್ರಸ್ತುತ ಕಾಲದಲ್ಲಿ ಭಾರತದಲ್ಲಿ ಆಗುತ್ತಿರುವುದು, ಅದು ನಿಮಗೆ ಚೆನ್ನಾಗಿ ಗೊತ್ತಿದೆ. ಜೀವನದ ಆ ಸಮಗ್ರ ಬಹಿರಂಗದ ಚಲನೆಯನ್ನು ಅರ್ಥಮಾಡಿಕೊಳ್ಳದೇ ನೀವು ಅಂತರಂಗದ ಚಲನೆಯನ್ನು ಅರ್ಥಮಾಡಿಕೊಳ್ಳಲಾರಿರಿ. ಅವು ಪರಸ್ಪರ ಸಂಬಂಧಿಸಿವೆ; ಅದು ಹೊರಹೋಗುವ ಮತ್ತು ಒಳಬರುವ ಒಂದು ಅಲೆಯಿದ್ದಂತೆ. ನೀವು ಅಲೆಯನ್ನು ಹೊರಗಿನದು ಮತ್ತು ಒಳಗಿನದು ಎಂದು ಬೇರ್ಪಡಿಸಲಾಗುವುದಿಲ್ಲ, ಅದು ಒಂದೆ ಚಲನೆ; ಮತ್ತು ಕೇವಲ ಭ್ರಷ್ಟವಾಗಿಲ್ಲದ ಬುದ್ಧಿ–ಮನಸ್ಸು ಮಾತ್ರ ಆ ಚಲನೆಯ ಮೇಲೆ ಸವಾರಿಮಾಡುತ್ತದೆ.

ಹಾಗಾಗಿ, ಅದೇ ವಾಸ್ತವ, ಮತ್ತು ನಾವು ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕು. ನಾವು ವಾಸ್ತವವನ್ನು ಅರ್ಥಮಾಡಿಕೊಳ್ಳುವುದಿಲ್ಲ, ಏಕೆಂದರೆ ಪ್ರಜ್ಞೆ ಪ್ರಭಾವಗಳ ಪರಿಣಾಮ. ಆಲೋಚನೆಯನ್ನು ಸಾಕಾರಗೊಳಿಸಿರುವ ಪ್ರಭಾವ, ಜಾಗೃತ ಹಾಗೂ ಸುಪ್ತ ಮನಸ್ಸು–ಬುದ್ಧಿಯನ್ನು ಸಾಕಾರಗೊಳಿಸುತ್ತಿರುವ ಪ್ರಭಾವಗಳಿಂದಾಗಿ ನಾವು ವಾಸ್ತವವನ್ನು ನೋಡಲು ಸಾಧ್ಯವಿಲ್ಲ. ವಾರ್ತಾಪತ್ರಿಕೆಗಳು, ಭಾಷಣಗಳು,

ಪುಸ್ತಕಗಳು, ಸಿನಿಮಾ, ಆಹಾರ, ಬಟ್ಟೆಗಳು, ವಾತಾವರಣ, ಕಟ್ಟಡಗಳು, ಗಾಳಿ – ಅವೆಲ್ಲವೂ ನಿಮ್ಮನ್ನು, ನಿಮ್ಮ ಮನಸ್ಸು–ಬುದ್ಧಿಯನ್ನು, ಅರಿವಿನೊಂದಿಗೆ ಅಥವಾ ಅರಿವಿಲ್ಲದೇ ಪ್ರಭಾವಿಸುತ್ತವೆ. ಪ್ರತಿಯೊಂದು ಬಗೆಯ ಪ್ರಚಾರ, ರಾಜಕೀಯ ಅಥವಾ ಧಾರ್ಮಿಕ, ಸಂಪ್ರದಾಯವಾಗಿರುವ ತಥಾಕಥಿತ ದೇವರುಗಳು, ಪ್ರತಿಯೊಂದೂ ಆಲೋಚನೆಯನ್ನು ಪ್ರಭಾವಿಸುತ್ತದೆ ಮತ್ತು ಸಾಕಾರ ಮಾಡುತ್ತದೆ. ಈಗ ಹೇಳಲ್ಪಡುತ್ತಿರುವುದನ್ನು ನೀವು ಆಲಿಸುತ್ತಿದ್ದೀರಿ, ಮತ್ತು ನೀವು ಪ್ರಭಾವಿಸಲ್ಪಡುತ್ತಿಲ್ಲ. ನೀವು ಪ್ರಭಾವಿಸಲ್ಪಡುತ್ತಿಲ್ಲ, ಏಕೆಂದರೆ ಇಲ್ಲಿ ಯಾವುದೇ ನಿರ್ದೇಶನವಿಲ್ಲ, ಬಲವಂತವಿಲ್ಲ, ಒತ್ತಡವಿಲ್ಲ. ವಕ್ತಾರ ಕೇವಲ ನೋಡಿ, ಗಮನಿಸಿ, ಆಲಿಸಿ, ವೀಕ್ಷಿಸಿ ಎಂದು ಹೇಳುತ್ತಾನೆ, ಹಾಗಾಗಿ ವಕ್ತಾರ ಹೇಳುವುದು ನಿಮ್ಮನ್ನು, ಅರಿವಿನಲ್ಲಿ ಅಥವಾ ಅರಿವಿಲ್ಲದೇ, ಪ್ರಭಾವಿಸುವುದೇ ಇಲ್ಲ. ಆದರೆ ನೀವು ಸಾಮಾಜಿಕ ಪ್ರಭಾವವನ್ನು ಅರ್ಥ ಮಾಡಿಕೊಳ್ಳಬೇಕು.

ಮನಸ್ಸು–ಬುದ್ಧಿಗೆ ಪ್ರಭಾವದಿಂದ ಸ್ವತಂತ್ರವಾಗಿರಲು ಸಾಧ್ಯವೇ? ಸ್ವಾಮಿ, ಪ್ರಭಾವ ನಿಮಗರ್ಥವಾಗುತ್ತದೆಯೇ? – ಮಾತು, ಕುಟುಂಬ, ನಿಮ್ಮ ಹೆಂಡತಿ, ನಿಮ್ಮ ಗಂಡ, ನೀವು ಓದುವ ಪುಸ್ತಕಗಳು, ಮತ್ತು ಅರಿವಿಲ್ಲದೇ ನಿಮ್ಮ ಮೇಲೆ ಬಂದುಬೀಳುವ ವಿಷಯಗಳು. ನೀವು ಪ್ರತಿಯೊಂದು ಪ್ರಭಾವದ ಅರಿವಿನಲ್ಲಿರಲು ಸಾಧ್ಯವೇ – ಆಯ್ಕೆ ಇಲ್ಲದೇ ಅರಿವಿನಲ್ಲಿರುವುದು, ನಿಮ್ಮ ಸುತ್ತಲೂ ನಡೆಯುತ್ತಿರುವ ಪ್ರತಿಯೊಂದು ಪ್ರಭಾವದ ಕೇವಲ ಅರಿವಿನಲ್ಲಿರುವುದು? ಅದು ಸಾಧ್ಯವೇ? ಏಕೆಂದರೆ, ನೀವು ಸ್ವತಂತ್ರರಾಗಿದ್ದಲ್ಲಿ, ನೀವು ಪ್ರಭಾವವನ್ನು ಗಮನಿಸಲು ಸಾಧ್ಯವಾದಲ್ಲಿ, ನಿಮ್ಮ ಮನಸ್ಸು–ಬುದ್ಧಿ ಅದಾಗಲೇ ಹರಿತವಾಗಿದೆ ಮತ್ತು ಪ್ರಭಾವದಿಂದ ತನ್ನನ್ನು ಸ್ವತಂತ್ರಗೊಳಿಸಿಕೊಳ್ಳಲು ಸಶಕ್ತವಾಗಿದೆ. ಇದೊಂದು ಸಂಕೀರ್ಣ ವಿಷಯ, ಅದಕ್ಕೆ ಗಮನ ಬೇಕು, ಅದನ್ನು ಕಂಡುಕೊಳ್ಳಲು ನಿಮ್ಮೆಲ್ಲ ಆಲೋಚನೆ ಬೇಕು, ಏಕೆಂದರೆ ನೀವೇ ಪ್ರಭಾವದ ಪರಿಣಾಮ. ನೀವೇ ಉನ್ನತ ಆತ್ಮ, ಇತ್ಯಾದಿ ನಂಬಿದಾಗ, ನಿಮ್ಮಲ್ಲಿ ದೇವರು, ದೈವತ್ವ, ಆತ್ಮ ಇದೆ ಎನ್ನುವಾಗ – ಅವೆಲ್ಲವೂ ಪ್ರಭಾವವೇ. ಒಬ್ಬ ಕಮ್ಯುನಿಷ್ಟ್ ದೇವರನ್ನು ನಂಬದಿರುವಾಗ, ಅವನೂ ಪ್ರಭಾವಿತನಾಗಿದ್ದಾನೆ.

ಆದ್ದರಿಂದ, ಜೀವನವೆಲ್ಲವೂ ಪ್ರಭಾವಕ್ಕೊಳಗಾಗಿದೆ. ಪ್ರಭಾವದಿಂದ ಸಂಪೂರ್ಣವಾಗಿ ಸ್ವತಂತ್ರವಾಗಿರಲು ಸಾದ್ಯವೇ? ಇಲ್ಲವಾದರೆ ನಿಮ್ಮ ಯಾವುದೇ ಆಲೋಚನೆ, ನಿಮ್ಮ ಯಾವುದೇ ನಿರಾಕರಣೆ, ನಿಮ್ಮ ಯಾವುದೇ ಕ್ರಿಯೆ, ನಿಮ್ಮ ಗತಕಾಲದ ಪರಿಣಾಮ, ನಿಮ್ಮ ಅನುಬಂಧನದ ಪರಿಣಾಮ; ಆದ್ದರಿಂದ ಇಂತಹ ಮನಸ್ಸು–ಬುದ್ಧಿ ಸತ್ಯತೆ ಇದೆಯೇ ಎಂದು ಕಂಡುಕೊಳ್ಳಲು ಬಹುಶ: ಸ್ವತಂತ್ರವಾಗಿರುವುದಿಲ್ಲ. ಹಾಗಾಗಿ, ಪ್ರಭಾವದಿಂದ ಸ್ವತಂತ್ರವಾಗಿರಲು ಸಾಧ್ಯವೇ? ಅಂದರೆ, ನಿಜವಾಗಲೂ ಅನುಭವದಿಂದ ಸ್ವತಂತ್ರವಾಗಿರುವುದು ಸಾಧ್ಯವೇ? ಪ್ರಸ್ತುತದಲ್ಲಿ ಆ ವಿಷಯಕ್ಕೆ ಬರೋಣ. ಖಂಡಿತವಾಗಿ, ನೀವು ಎಲ್ಲಾ ಪ್ರಭಾವಗಳಿಂದ ಸ್ವತಂತ್ರವಾಗಿರಲು ಸಾಧ್ಯವಿಲ್ಲ. ನಿಮ್ಮ ಅರಿವಿನಲ್ಲಿ ಇರುವುದರಿಂದ ಮಾತ್ರ ಸ್ವತಂತ್ರರಾಗಿರಲು ಸಾಧ್ಯ. ಆದರೆ ನೀವು ಕೇವಲ ಕೆಲವು ಪ್ರಭಾವಗಳ ಅರಿವಿನಲ್ಲಿರಬಹುದು ಮಾತ್ರ; ಎಲ್ಲ ಸಮಯದಲ್ಲೂ ಪ್ರಭಾವಗಳನ್ನು ಸ್ವೀಕರಿಸುತ್ತಿರುವ ಸಮಗ್ರ ಸುಪ್ತತೆಯೊಂದಿದೆ.

ದಯವಿಟ್ಟು ಇದನ್ನು ಆಲಿಸಿ. ಎಲ್ಲ ಪ್ರಭಾವಗಳಿಂದ ಸ್ವತಂತ್ರರಾಗಿರಲು ಸಾಧ್ಯವೇ?

ಇಲ್ಲವಾದರೆ ನೀವು ಸ್ವಾತಂತ್ರ್ಯದ ಪ್ರಶ್ನೆಯನ್ನು ಪರಿಶೋಧಿಸುವುದಕ್ಕಾಗಿ, ಮತ್ತು ಸ್ವತಂತ್ರರಾಗಿರುವುದಕ್ಕಾಗಿ ಮುಂದುವರಿಯಲು ಸಾಧ್ಯವಿಲ್ಲ. ನಾನು ಹೇಳಿದಂತೆ, ನೀವು ಎಂದಿಗೂ ಪ್ರಭಾವದಿಂದ ಸ್ವತಂತ್ರವಾಗಿರಲು ಸಾಧ್ಯವಿಲ್ಲ; ಆದರೆ ನೀವು ಸಂಧಿಸುವ ಪ್ರತಿಯೊಂದು ಪ್ರಭಾವವನ್ನು ವೀಕ್ಷಿಸಲು ಯಾವಾಗ್ಯೂ ಸಾಧ್ಯ. ಅದರರ್ಥ, ನೀವೇನು ಮಾಡುತ್ತಿದ್ದೀರಿ, ನೀವೇನು ಯೋಚಿಸುತ್ತಿದ್ದೀರಿ, ನೀವೇನು ಭಾವಿಸುತ್ತಿದ್ದೀರಿ ಎಂಬುದನ್ನು ಪ್ರತಿ ನಿಮಿಷ ವೀಕ್ಷಿಸುವುದು; ಮತ್ತು ಆ ವೀಕ್ಷಣೆಯಲ್ಲಿ ಯಾವುದೇ ಪ್ರಕಾರದ ವಿರೂಪತೆ, ಸ್ವಂತ–ಅಭಿಪ್ರಾಯ, ಮೌಲ್ಯಮಾಪನ ಉಂಟಾಗದಂತಿರುವುದು. ಅಧಿಕಾರ ದುಷ್ಟತೆಯಾದ್ದರಿಂದ, ಎಲ್ಲ ಪ್ರಭಾವವೂ ದುಷ್ಟತೆಯೇ. ಎಲ್ಲ ಪ್ರಭಾವ ಮನಸ್ಸು–ಬುದ್ಧಿಯನ್ನು ಸಾಕಾರಗೊಳಿಸುತ್ತದೆ, ಭ್ರಷ್ಟಗೊಳಿಸುತ್ತದೆಯಾದ್ದರಿಂದ, ಒಳ್ಳೆಯ ಪ್ರಭಾವ ಅಥವಾ ಕೆಟ್ಟ ಪ್ರಭಾವ ಎಂಬುದಿಲ್ಲ. ಆದ್ದರಿಂದ, ಪ್ರತಿಯೊಂದು ಬಗೆಯ ಪ್ರಭಾವ – ಅದು ಒಳ್ಳೆಯದೋ ಅಥವಾ ಕೆಟ್ಟದೋ ಎಂಬುದು ಮಹತ್ವದ್ದಲ್ಲ – ಮನಸ್ಸು–ಬುದ್ಧಿಯನ್ನು ವಿರೂಪಗೊಳಿಸುತ್ತದೆ, ವಿಕಲಗೊಳಿಸುತ್ತದೆ, ಭ್ರಷ್ಟಗೊಳಿಸುತ್ತದೆ ಎಂಬ ವಾಸ್ತವವನ್ನು ನಾವು ಅರ್ಥಮಾಡಿಕೊಂಡರೆ, ಆ ವಾಸ್ತವವನ್ನು ನಾವು ಅರ್ಥಮಾಡಿಕೊಂಡರೆ, ಆ ವಾಸ್ತವವನ್ನು ನೋಡಲು ಸಾಧ್ಯವಾದರೆ, ಆಗ ನಮಗೆ ಮನಸ್ಸು–ಬುದ್ಧಿಯ ಮೇಲೆ ಬಂದುಬೀಳುವ ಪ್ರತಿಯೊಂದು ಪ್ರಭಾವ ಸಮಗ್ರವಾಗಿ ಅರಿವಾಗುತ್ತದೆ. ಅಂದರೆ: ಅಲ್ಲಗಳೆಯುವುದರಲ್ಲಿ, ನಿರಾಕರಣೆಯಲ್ಲಿ, ವಾಸ್ತವ, ಸತ್ಯ ಗೋಚರಿಸುತ್ತದೆ. ನೀವು ಅಲ್ಲಗಳೆದಾಗ, ನೀವು ಇಲ್ಲ ಎಂದಾಗ, ನೀವು ಒಂದು ಉದ್ದೇಶದಿಂದ ಅಥವಾ ಉದ್ದೇಶವಿಲ್ಲದೇ ಹಾಗೆ ಮಾಡುತ್ತೀರಿ.

ಬಹುಶ: ನೀವೆಂದೂ ಇಲ್ಲ ಎಂದು ಹೇಳಿಲ್ಲ. ಏಕೆಂದರೆ, ನಾವು ಬಹಳಷ್ಟು ಜನ ಹೌದು–ಸ್ವಾಮಿಗಳು; ನಾವು ಸ್ವೀಕರಿಸುತ್ತೇವೆ, ನಾವೆಂದೂ ಯಾವ ಉದ್ದೇಶವೂ ಇಲ್ಲದೇ ಇಲ್ಲ ಎಂದು ಹೇಳುವುದಿಲ್ಲ – ಅದರರ್ಥ, ನೀವು ಉದ್ದೇಶವಿಲ್ಲದೇ ಇಲ್ಲ ಎಂದು ಹೇಳಿದಾಗ, ನೀವು ಪ್ರಭಾವದಿಂದ ಹೊರಗಾಗುತ್ತೀರಿ.

> "ತರ್ಕ ಮತ್ತು ವಿಶ್ಲೇಷಣೆಗಳಿಗೆ ನಿಯಮಿತವಾದ ಬುದ್ಧಿಯು ಸತ್ಯವೇನೆಂಬುದನ್ನು ಗ್ರಹಿಸಲು ಅಶಕ್ತ."
>
> – ಜೆ. ಕೃಷ್ಣಮೂರ್ತಿ

ದಯವಿಟ್ಟು ಇದನ್ನು ಅರ್ಥವಾಡಿಕೊಳ್ಳಿ. ಒಮ್ಮೆ ಅರ್ಥಮಾಡಿಕೊಂಡರೆ ಅದು ತುಂಬಾ ಸರಳ ವಿಷಯ. ನೀವು ಅಧಿಕಾರಕ್ಕೆ, ಕೀರ್ತಿಗೆ, ಮಹತ್ವಾಕಾಂಕ್ಷೆಗೆ, ಶಕ್ತಿಗೆ, ಇಲ್ಲ/ಬೇಡ ಎಂದಾಗ, ನೀವು ಅಧಿಕಾರ, ಶಕ್ತಿ, ಸ್ಥಾನ ಹೊಂದಿಲ್ಲದವರಾಗಿದ್ದು, ಹೊಂದುವ ಬಯಕೆ ಹೊಂದಿರುತ್ತೀರಿ, ಆದ್ದರಿಂದ ಹಾಗೆ ಮಾಡುತ್ತೀರಿ; ಸ್ಪಷ್ಟವಾಗಿ, ನಿಮಗದು ಸಿಕ್ಕಲಾರದು, ಹಾಗಾಗಿ ನೀವು ಇಲ್ಲ, ನಾನದನ್ನು ಹೊಂದಲಾರೆ ಎನ್ನುತ್ತೀರಿ. ಹೆಚ್ಚಿನ ಜನ ಅದನ್ನೇ ಮಾಡುವುದು; ಆದರೆ ಅವರಿಗೆ ಸ್ಥಾನ ಕೊಡಿ, ಅಧಿಕಾರ ಅರ್ಪಿಸಿ, ಅವರದನ್ನು ಸ್ವೀಕರಿಸುತ್ತಾರೆ. ಆದ್ದರಿಂದ, ಅಲ್ಲಿ ಒಂದು ಉದ್ದೇಶದಿಂದ ನಿರಾಕರಿಸುವುದು, ಒಂದು ಉದ್ದೇಶದಿಂದ ಇಲ್ಲ/ಬೇಡ ಎನ್ನುವುದು ಇದೆ. ಉದ್ದೇಶವಿಲ್ಲದ ನಿರಾಕರಣೆ, ಇಲ್ಲ/ಬೇಡ ಎನ್ನುವುದೂ ಇದೆ – ಅದೆಂದರೆ, ಯಾವುದೇ ಪ್ರಕಾರದ – ಆಧ್ಯಾತ್ಮಿಕ ಅಥವಾ ಬೇರೆಯ, ಬಹಿರಂಗದ ಅಥವಾ ಅಂತರಂಗದ – ಮಹತ್ವಾಕಾಂಕ್ಷೆ ನಾಶಮಾಡುತ್ತದೆ, ಭ್ರಷ್ಟಗೊಳಿಸುತ್ತದೆ ಎಂಬ ವಾಸ್ತವವನ್ನು ನೋಡುವುದು. ನೀವದನ್ನು ಸತ್ಯವೆಂದು ಕಂಡರೆ, ಆಗ ನೀವು ಪ್ರತಿಯೊಂದು ಪ್ರಕಾರದ, ಧನಾತ್ಮಕ ಹಾಗೂ ಋಣಾತ್ಮಕ, ಪ್ರಭಾವದ ಅರಿವಿನಲ್ಲಿರುತ್ತೀರಿ. ಆಗ ನೀವು ಕೇವಲ ವಾಸ್ತವದೊಂದಿಗೆ ಮಾತ್ರ ಸಂಬಂಧಿಸಿರುತ್ತೀರಿ.

ಆದ್ದರಿಂದ, ನಿರಾಕರಣೆಯೇ ಪ್ರಭಾವದ ಅಂತ್ಯಗೊಳಿಸುವಿಕೆ, ಧನಾತ್ಮಕ ಮನಸ್ಸು–ಬುದ್ಧಿಯಲ್ಲ. ಮನಸ್ಸು–ಬುದ್ಧಿ ಎಂದರೆ ನಾನು ಅನುಸರಿಸುವ, ಅನುಕರಿಸುವ, ಪಾಲಿಸುವ್, ಸಮಾಜದಿಂದ ಗೌರವಾನ್ವಿತ ಎಂದು ಮಾಡಲ್ಪಟ್ಟಿರುವ ಮನಸ್ಸು–ಬುದ್ಧಿ ಎಂದು ಅರ್ಥೈಸುತ್ತೇನೆ – ಅದು ಕೇವಲ ಒಂದು ನಿಶ್ಚಿತ ಸಾಮಾಜಿಕ, ಪಾರಿಸಾರಿಕ, ಸಾಂಸ್ಕೃತಿಕ ಮಾದರಿಯನ್ನು ಸ್ವೀಕರಿಸಿ, ಅನುಸರಿಸುತ್ತಿರುವ ಮನಸ್ಸು–ಬುದ್ಧಿಯಷ್ಟೇ. ಆ ಮನಸ್ಸು–ಬುದ್ಧಿಯನ್ನು ಧನಾತ್ಮಕ ಮನಸ್ಸು–ಬುದ್ಧಿ ಎನ್ನಲಾಗುತ್ತದೆ; ಆದರೆ ಅದು ಧನಾತ್ಮಕ ಮನಸ್ಸು–ಬುದ್ಧಿಯಲ್ಲವೇ ಅಲ್ಲ, ಅದೊಂದು ಸತ್ತ ಮನಸ್ಸು–ಬುದ್ಧಿ. ಋಣಾತ್ಮಕ ಮನಸ್ಸು–ಬುದ್ಧಿಯನ್ನು ನಾನು ಉದ್ದೇಶವಿಲ್ಲದೇ ನಿರಾಕರಿಸುವ ಮನಸ್ಸು–ಬುದ್ಧಿ ಎಂದು ಅರ್ಥೈಸುತ್ತೇನೆ. ಪ್ರಪಂಚದ ಗತಿಯನ್ನೇ ಬದಲಿಸುತ್ತೇನೆ ಅಥವಾ ಮಾನವನನ್ನು ಬದಲಿಸುತ್ತೇನೆ ಎಂದು ಯೋಚಿಸುವ ರಾಜಕಾರಣಿಯ ಧೋರಣೆಯನ್ನು ನೀವು ನಿರಾಕರಿಸಿದಾಗ, ರಾಜಕಾರಣಿಯ ಸಮಗ್ರ ಧೋರಣೆಯನ್ನು ನೀವು ನಿರಾಕರಿಸಿದಾಗ, ನೀವು ಆ ನಿರ್ದಿಷ್ಟ ಪ್ರಭಾವದಿಂದ ಸಂಪೂರ್ಣವಾಗಿ ಹೊರಗಿರುತ್ತೀರಿ. ರಾಜಕಾರಣಿ, ತಾನು ದೀರ್ಘಕಾಲ, ದೂರದೃಷ್ಟಿ ಎಂದು ಯೋಚಿಸುವ, ತಕ್ಷಣವನ್ನು ಭವಿಷ್ಯಕ್ಕೆ ಕಲ್ಪಿಸಿದ್ದರ ಬಗ್ಗೆ ಕಾಳಜಿ ಹೊಂದಿದ್ದಾನೆ; ಆದರೆ ಆ ದೂರದೃಷ್ಟಿ ಸಾಕಷ್ಟು ಸಮೀಪದೃಷ್ಟಿಯೇ. ಅಂದರೆ, ರಾಜಕಾರಣಿಗೆ, ಎಲ್ಲ ತಂತ್ರಜ್ಞರಂತೆ, ಸಮಗ್ರ ಮಾನವನವನೊಂದಿಗೆ ಕಾಳಜಿಯಿಲ್ಲ; ಕೇವಲ ಹೊರಗಿನದರೊಡನೆ ಮಾತ್ರ ಅವನ ಕಾಳಜಿ. ಮತ್ತು ನೀವು ಸಮೀಪದೃಷ್ಟಿಯ ಹೊರಗಿನದನ್ನು ಯಾವುದೇ ಉದ್ದೇಶವಿಲ್ಲದೇ ನಿರಾಕರಿಸಿದಾಗ, ನೀವು ಆ ಕ್ಷೇತ್ರದಿಂದ ಸಂಪೂರ್ಣವಾಗಿ ಹೊರಗುಳಿಯುವಿರಿ; ಆಗ ನೀವು ಮಾನವನ ಸಮಗ್ರ ಅಸ್ತಿತ್ವದೊಡನೆ ಕಾಳಜಿ ಹೊಂದಿರುತ್ತೀರಿ.

> "ಏಕಾಂಗಿಯಾಗಿರುವುದರಲ್ಲಿ ಸೌಂದರ್ಯವಿದೆ. ಏಕಾಂಗಿಯಾಗಿರುವುದು ಎಂದರೆ ಒಂಟಿಯಾಗಿರುವುದೆಂದಲ್ಲ. ಹಾಗೆಂದರೆ, ಮನಸ್ಸು ಸಮಾಜದಿಂದ ಪ್ರಭಾವಿತವಾಗಿಲ್ಲ ಹಾಗೂ ಕಲುಷಿತವಾಗಿಲ್ಲ ಎಂದರ್ಥ."
>
> – ಜೆ. ಕೃಷ್ಣಮೂರ್ತಿ

ಆದ್ದರಿಂದ, ಅಲ್ಲಗಳೆಯುವುದರ, ನಿರಾಕರಣೆಯ ಮೂಲಕ, ವಾಸ್ತವವನ್ನು ಎದುರಿಸುವ, ಮತ್ತು ಕೇವಲ ವಾಸ್ತವದೊಂದಿಗೆ ಉಳಿಯುವ ಮನಸ್ಸು–ಬುದ್ಧಿಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಇದನ್ನು ನಾವು ತುಂಬಾ ಕಠಿಣ ಮಾಡುತ್ತಿಲ್ಲ ಎಂದುಕೊಳ್ಳುತ್ತೇನೆ. ನಾವು ಹೇಳುತ್ತಿರುವುದು ಕಠಿಣವಾಗಿಲ್ಲ. ಉದಾಹರಣೆಗೆ, ನಾನು ಕೋಪಗೊಂಡಿದ್ದರೆ, ನಾನು ಕೋಪಗೊಂಡಿರುವುದು ಒಂದು ವಾಸ್ತವ. ಆಮೇಲೆ ನಾನು ಕೋಪಗೊಂಡಿರುವುದನ್ನು ಅಲ್ಲಗಳೆಯುವುದು, ನಾನು ಕೋಪಗೊಂಡಿರುವುದು ಏಕೆ ಎಂದು ಕಾರಣ ಹುಡುಕುವುದು, ಬದಲಿಸುವುದು, ಮಾರ್ಪಡಿಸುವುದು, ಅದನ್ನು ಖಂಡಿಸುವುದು, ಆದರ್ಶ ಅನುಸರಿಸುವುದು – ಅವೆಲ್ಲವೂ ವಾಸ್ತವದ ನಿರಾಕರಣೆ, ವಾಸ್ತವದಿಂದ ಗಮನಾಂತರಿಸುವಿಕೆ. ಮತ್ತು ನಾನು ಎಲ್ಲ ನೆಪ, ಎಲ್ಲ ಗಮನಾಂತರವನ್ನು ಸಂಪೂರ್ಣವಾಗಿ ನಿರಾಕರಿಸಿದಾಗ, ನನ್ನ ಮನಸ್ಸು–ಬುದ್ಧಿ ಎಲ್ಲ ಪ್ರಭಾವದಿಂದ ಖಾಲಿಯಾಗಿರುತ್ತದೆ, ಹಾಗಾಗಿ ವಾಸ್ತವದತ್ತ ನೋಡಲು ಶಕ್ತವಾಗಿರುತ್ತದೆ; ಆಗ ನಾನು ವಾಸ್ತವದತ್ತ ನೋಡುತ್ತೇನೆ.

ನೀವು ಆಲಿಸುತ್ತಿರುವಂತೆಯೇ ದಯವಿಟ್ಟು ಇದನ್ನು ಮಾಡಿ. ನಿಮ್ಮಲ್ಲಿ ಹೆಚ್ಚಿನವರು ಮಹತ್ವಾಕಾಂಕ್ಷಿಗಳು; ನಿಮ್ಮಲ್ಲಿ ಹೆಚ್ಚಿನವರು ವಿರೋಧಾಭಾಸದ ಜೀವನ ನಡೆಸುತ್ತಿದ್ದೀರಿ, ಮತ್ತು ನಿಮಗೆ ವಿರೋಧಾಭಾಸದ ನೋವು ಗೊತ್ತಿದೆ. ನೀವು ವಂಶದ ಮೂಲಕ, ಒಂದು ಹೆಸರಿನ ಮೂಲಕ, ಒಂದು ಪುಸ್ತಕ ಬರೆಯುವ ಮೂಲಕ, ನಿಮ್ಮ ಮಕ್ಕಳ ಮೂಲಕ, ಅಥವಾ ಒಬ್ಬ ದೊಡ್ಡಮನುಷ್ಯನಾಗಲು ಪ್ರಯತ್ನಿಸುವ ಮೂಲಕ, ತೃಪ್ತಿ ಹೊಂದಲು ಪ್ರಯತ್ನಿಸುತ್ತಿದ್ದೀರಿ – ಯಾವಾಗಲೂ ನೀವು ತೃಪ್ತರಾಗಲು ಪ್ರಯತ್ನಿಸುತ್ತಿದ್ದೀರಿ. ಮತ್ತು ಎಲ್ಲಿ ಈ ತೃಪ್ತಿಯ ಪ್ರಚೋದನೆ ಇರುತ್ತದೋ, ಅಲ್ಲಿ ದು:ಖದೊಡಗೂಡಿದ ಹತಾಶೆಯೂ ಇರುತ್ತದೆ. ನೀವು ಅಂತರಿಕವಾಗಿ ಒಂಟಿಯಾಗಿ, ಖಾಲಿಯಾಗಿ ಇರುವುದರಿಂದ ಸಂತೃಪ್ತಿಗಾಗಿ ಪ್ರಯತ್ನಿಸುತ್ತೀರಿ. ಅದೊಂದು ವಾಸ್ತವ. ಈಗ, ನೀವು ಮಹತ್ವಾಕಾಂಕ್ಷಿಗಳು ಎಂಬ ವಾಸ್ತವದ ಕಡೆ ನೋಡಿ ಮತ್ತು ಸಮಜಾಯಿಷಿ ಹುಡುಕಬೇಡಿ; ಸ್ವಾಧೀನತೆ, ಶಕ್ತಿ ಮತ್ತು ಮಹತ್ವಾಕಾಂಕ್ಷೆಗಳ ಮೇಲೆ ಕಟ್ಟಲ್ಪಟ್ಟಿರುವ ಈ ಕೊಳೆತ ಸಮಾಜದಲ್ಲಿ ಬದುಕಲು ನಾನೇನು ಮಾಡಬೇಕು? ಎಂದು ಕೇಳಬೇಡಿ. ನೀವು ಆ ಸಮಾಜವನ್ನು ನಿರಾಕರಿಸಿದಾಗ, ನೀವು ಆ ಸಮಾಜದಿಂದ ಹೊರಗುಳಿಯುತ್ತೀರಿ. ಆದರಿಂದ, ನೀವು ಮಹತ್ವಾಕಾಂಕ್ಷಿಯಾಗಿದ್ದೀರಿ, ಅಸೂಯಾಪರರಾಗಿದ್ದೀರಿ, ಸ್ವಾಧೀನತಾಶೀಲರಾಗಿದ್ದೀರಿ ಎಂಬ ವಾಸ್ತವದೆಡೆಗೆ ನೋಡಬೇಕು, ಮತ್ತು ನಿಮ್ಮನ್ನು ಅದರೆಡೆಗೆ ನೋಡದಂತೆ ತಡೆಯುವ – ಆದರ್ಶಗಳು ಮತ್ತಿತ್ಯಾದಿ – ಪ್ರಭಾವಗಳ ಅರಿವಿನಲ್ಲಿರಬೇಕು. ನೀವು ಪ್ರಭಾವಗಳನ್ನು ನಿರಾಕರಿಸಿದಾಗ, ನೀವು ವಾಸ್ತವದಿಂದ ವಾಸ್ತವಕ್ಕೆ ಚಲಿಸುತ್ತೀರಿ. ಆದ್ದರಿಂದ, ಅಲ್ಲಗಳೆಯುವುದರಿಂದ, ನಿರಾಕರಣೆಯಿಂದ, ವಾಸ್ತವದ ಕಡೆ ನೋಡಲು ಶಕ್ತಿ ಇರುತ್ತದೆ – ನಿಮಗೆ ಪ್ರಚಂಡ ಶಕ್ತಿ ಬೇಕು ಮತ್ತು ಘರ್ಷಣೆಯಲ್ಲ.

– ಜೆ. ಕೃಷ್ಣಮೂರ್ತಿ, ಸಾರ್ವಜನಿಕ ಮಾತುಕತೆ 3, ಮುಂಬೈ, ಇಂಡಿಯಾ, 28 ಫೆಬ್ರವರಿ 1962 ❐

ನೂತನವಾಗಿ ಬಿಡುಗಡೆಯಾಗಿರುವ ಅನುವಾದಿತ ಪುಸ್ತಕ



ಜೆ.ಕೆ. ಪುಸ್ತಕ ಮಾಲೆ ಪ್ರಕಟಣೆ

೧. ಧ್ಯಾನ ಚಿಂತನ
ಅನು. ಡಾ. ನಿ. ಮುರಾರಿ ಬಲ್ಲಾಳ ರೂ. ೫೦/-

೨. ಹಿಂಸೆಯನ್ನು ಮೀರಿ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೧೨೦/-

೩. ಮೊದಲ ಹಾಗೂ ಕೊನೆಯ ಬಿಡುಗಡೆ
ಅನು. ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿ ರೂ. ೨೦೦/-

೪. ಸಂಸ್ಕೃತಿ ಸಂಗತಿ
ಅನು. ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ ರೂ. ೧೫೦/-

೫. ಅನುದಿನ ಚಿಂತನ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫೦/-

೬. ಬಾಳಿಗೊಂದು ಭಾಷ್ಯ - ಸಂಪುಟ ೧
ಅನು. ಡಾ. ಮಹಾಬಲೇಶ್ವರರಾವ್ ರೂ. ೧೩೦/-

೭. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೦/-

೮. ಶಿಕ್ಷಣ ಮತ್ತು ಜೀವನ
ಅನು. ಡಾ. ಎಚ್.ಎಸ್. ರಾಘವೇಂದ್ರ ರಾವ್ ರೂ. ೬೫/-

೯. ಭಯದಾಚೆಯ ಬದುಕು
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೦/-

೧೦. ದುಃಖಕ್ಕೆ ವಿದಾಯ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೧. ಸಂಘರ್ಷವಿರದ ಬದುಕಿಗಾಗಿ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೨. ಸಂಬಂಧವೆಂದರೇನು?
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೩. ಜೆ.ಕೆ. ಜೀವನ ದರ್ಶನ
ಲೇಖಕರು : ನಿ. ಮುರಾರಿ ಬಲ್ಲಾಳ ರೂ. ೧೩೦/-

೧೪. ಜೆ. ಕೃಷ್ಣಮೂರ್ತಿ - ಶಿಕ್ಷಣ
ಅನು. (ದ್ವಿತೀಯ ಆವೃತ್ತಿ) ಎಸ್.ಡಿ. ಕಾಶೀಕರ ರೂ. ೯೦/-

೧೫. ತಿಳಿದುದೆಲ್ಲವ ಬಿಟ್ಟು...
ಅನು. ಪ್ರೊ. ಜಿ. ವೆಂಕಟಸುಬ್ಬಯ್ಯ ರೂ. ೯೦/-

೧೬. ಬಾಳಿಗೊಂದು ಭಾಷ್ಯ - ಸಂಪುಟ ೨
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೫೦/-

೧೭. ಪ್ರೀತಿ ಎಂದರೇನು?
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೮. ಬಾಳಿಗೊಂದು ಭಾಷ್ಯ ಸಂಪುಟ - ೩
ಅನು. ಡಾ|| ಮಹಬಲೇಶ್ವರ ರಾವ್ ರೂ. ೧೮೫/-

೧೯. ಅಸೂಯೆ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೩೦/-

೨೦. ಭಯ ನಿಮಗೇನು ಮಾಡೀತು ?
ಅನು. ಶ್ರೀ ಎಸ್. ದಿವಾಕರ್ ರೂ. ೪೦/-

೨೧. ಇನ್ನೊಬ್ಬರ ಬಗ್ಗೆ ಕಾಳಜಿ- ಹಾಗೆಂದರೇನು
ಅನು. ಡಾ|| ಹೆಚ್. ಎಸ್. ರಾಘವೇಂದ್ರ ರಾವ್ ರೂ. ೪೦/-

೨೨. ಸ್ವಾತಂತ್ರ್ಯ ಎಂದರೇನು?
ಅನು. ಶ್ರೀ ಗಿರೀಶ್ ವಾಘ್ ರೂ. ೪೦/-

೨೩. ಸಾವಿನೊಂದಿಗೆ ಬದುಕುವುದೆಂದರೆ?
ಅನು. ಡಾ|| ವನಮಾಲಾ ವಿಶ್ವನಾಥ್ ರೂ. ೨೫/-

೨೪. ಚಲನಶೀಲ ಬದುಕು – ಕಲಿಕೆ
ಅನು. ಡಾ|| ಮಹಾಬಲೇಶ್ವರ ರಾವ್ ರೂ. ೧೫೦/-

೨೫. ಬದುಕಿನ ಕಡೆಗೆ
ಅನು. ಶ್ರೀ ಎಸ್. ಡಿ. ಕಾಶೀಕರ್ ಮತ್ತು ಶ್ರೀಮತಿ ವನಮಾಲ ಆರ್. ರಾವ್ ರೂ. ೧೪೦/-

೨೬. ನೀವೇ ಲೋಕ, ನಿಮ್ಮೊಳಗೇ ಲೋಕ ರೂ. ೧೦೦/-
ಅನು. ಡಾ. ಮಹಾಬಲೇಶ್ವರ ರಾವ್

೨೭. ಮಾನವನಾಗುವುದು ರೂ. ೧೮೦/-
ಅನು. ಡಾ. ಮಹಾಬಲೇಶ್ವರ ರಾವ್

೨೮. ಆಯ್ಕೆಯ ನಿರರ್ಥಕತೆ
ಅನು. ಧರ್ಮಶ್ರೀ ಅಯ್ಯಂಗಾರ್ ರೂ. ೨೫/-

೨೯. ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ
ಅನು. ಶ್ರೀ ಓ. ಎಲ್. ನಾಗಭೂಷಣ ಸ್ವಾಮಿರೂ. ೨೫/-

೩೦. ಸ್ವಾತಂತ್ರ್ಯ, ಜವಾಬ್ದಾರಿ ಮತ್ತು ಶಿಸ್ತು
ಅನು. ಡಾ. ಸುವರ್ಣ ಬಿ.ಜೆ. ರೂ. ೨೫/-

೩೧. ಕಾಲ ಮತ್ತು ಕಾಲರಹಿತ
ಅನು. ಶ್ರೀಮತಿ ವನಮಾಲಾ ರಂಗನಾಥ ರಾವ್ರೂ. ೨೫/-

೩೨. ಧ್ಯಾನ ಮಗ್ನ ಮನಸ್ಸು
ಅನು. ಆಶಾ ಕೋಣಿ ರೂ. ೨೫/-

೩೩. ಕ್ರಿಯೆ ಮತ್ತು ಸಂಬಂಧ
ಅನು. ಶ್ರೀ ಬಿ.ಎ. ಸನದಿ ರೂ. ೨೫/-

೩೪. ಶಿಕ್ಷಣ
ಅನು. ಶ್ರೀ ಶ್ರೀಪತಿ ಕಾಶೀಕರ್ ರೂ. ೯೦/-

೩೫. ದೇವರು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೨೫/-

೩೬. ಒಲವು ಒಂಟಿತನ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೩೫/-

೩೭. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೫೦/-

೩೮. ಒಳಜಗತ್ತು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೮೦/-

೩೯. ಸಾಮಾಜಿಕ ಜವಾಬ್ದಾರಿ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೧೦/-

೪೦. ಶಿಕ್ಷಕನಿಗೆ ಶಿಕ್ಷಣ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೫೦/-

೪೧. ಲೋಕ ಶಿಕ್ಷಕ ಜೆ. ಕೃಷ್ಣಮೂರ್ತಿ–ಜೀವನ ಮತ್ತು ಬೋಧನೆ
ಆರ್.ಇ. ಮಾರ್ಕ್ ಲೀ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೨೫೦/-

ಅರಿವು ಅಂದರೇನು?

ಬಹಳ ದೂರದಿಂದ ಬಂದ 'ಬಿ' "ಅರಿವು ಅಂದರೇನು? ಮತ್ತು ನಾವು ಅರಿವುಳ್ಳವರಾಗುವುದು ಹೇಗೆ?" ಎಂದು ಪ್ರಶ್ನಿಸಿದ.

ಈ ಬಗೆಯ ಪ್ರಶ್ನೆಗೆ ಉತ್ತರ ಕೊಡುವಾಗ ಪ್ರಶ್ನಿಸುವ ವ್ಯಕ್ತಿ ಹೇಗೆ ಯೋಚಿಸುತ್ತಾನೆ? ಆತನ ಹಿನ್ನೆಲೆ ಏನು? ಎಂಬುದನ್ನು ತಿಳಿಯುವುದು ಅಗತ್ಯ; ಹೀಗಾಗಿ ನಾವು ಬದುಕಿನ ಬಗ್ಗೆ, ಅಸ್ತಿತ್ವದ ಸಂಕೀರ್ಣತೆಗಳ ಬಗ್ಗೆ, ಬದುಕಿನ ದುಃಖಗಳ ಬಗ್ಗೆ, ಪರ್ವತಗಳ ಚೆಲುವಿನ ಬಗ್ಗೆ ಮಾತನಾಡಿದೆವು.

ತಿಳಿವು ಮತ್ತು ಸ್ಪಷ್ಟತೆಯಿಂದ ಅರಿವು ಮೂಡುತ್ತದೆ. ಅದು ನೀವು ಕುರುಡಾಗಿ ಒಪ್ಪಿಕೊಳ್ಳುವಂಥದ್ದಲ್ಲ ಅಥವಾ ಯಾವುದೇ ಅಧಿಕಾರ ಕೇಂದ್ರದ ಉತ್ಪನ್ನವೂ ಅಲ್ಲ. ಅದು ಸ್ವ-ಜ್ಞಾನದ ಆರಂಭ ಮತ್ತು ಅಂತರಂಗದ ಫಲ; ಸ್ವ-ಜ್ಞಾನ ಮುಖೇನ ಅರಿವಿನ ಜ್ವಾಲೆಯ ತೀವ್ರತೆ ಗೋಚರಿಸುತ್ತದೆ. ಸತ್ ಚಿಂತನವು ಸ್ವ-ಜ್ಞಾನದಿಂದ ಒಡಮೂಡುತ್ತದೆ. ಈ ಸತ್ ಚಿಂತನವು ಅರಿವಿನ ತೀವ್ರತೆ ಹಾಗೂ ಗಾಢತೆಯ ದ್ರವ್ಯ. ಸತ್ ಚಿಂತನವಿಲ್ಲದಿದ್ದರೆ ಸ್ಪಷ್ಟತೆ ಇಲ್ಲ. ಅದು ಸಂಕಲ್ಪ ಬಲದಿಂದ ದೃಢ ನಿರ್ಧಾರದಿಂದ ಹೊರಹೊಮ್ಮುವುದಿಲ್ಲ. ಏಕೆಂದರೆ ಕೇವಲ ಸಂಕಲ್ಪವು ಒಲವುಗಳನ್ನು, ಅಭ್ಯಾಸಗಳನ್ನು ಮತ್ತು ಅಜ್ಞಾನವನ್ನು ಗಟ್ಟಿಗೊಳಿಸುತ್ತದೆ; ಆದರೆ ಗ್ರಹಿಕೆ, ಸ್ಪಷ್ಟೀಕರಣ ಸ್ವ-ಜ್ಞಾನದಿಂದ ಹುಟ್ಟಿದ ಸತ್ ಚಿಂತನದಿಂದ ಅರಳುತ್ತದೆ.

ಗೊಂದಲವಿರುವುದರಿಂದಾಗಿ, ನಮ್ಮ ಭಾವನೆ-ವಿಚಾರದಲ್ಲಿ ವಿಸಂಗತಿಗಳಿರುವುದರಿಂದಾಗಿ ಸ್ವ-ಅರಿವಿನ ಮೂಲಕ ನಾವು ಸ್ಪಷ್ಟತೆ ಹಾಗೂ ತಿಳಿವಳಿಕೆಗಳನ್ನು ಸಂಪಾದಿಸಬೇಕು. ವಿಸಂಗತಿಗಳಿಗೆ ನಮ್ಮ ಅತಿಯಾಸೆ, ಭಯ ಹಾಗೂ ಅಜ್ಞಾನವೇ ಕಾರಣ. ವಿಚಾರ-ಭಾವವನ್ನು ಅನುಸರಿಸುವುದಕ್ಕೆ ಬದಲಾಗಿ, ಗಾಢವಾಗಿ ಯೋಚಿಸುವುದು ಹಾಗೂ ಭಾವಿಸುವುದಕ್ಕೆ ಬದಲಾಗಿ ಕೇವಲ ತೀರ್ಪು, ನಿರಾಕರಣ ಅಥವಾ ಅನುಮೋದನೆಯಿದ್ದಲ್ಲಿ ಸ್ಪಷ್ಟತೆಯಿರುವುದಿಲ್ಲ. ಇದ್ದರೂ ಅದು ಮಸುಕಾಗಿರುತ್ತದೆ. ಯೋಚಿಸಲು, ಭಾವಿಸಲು, ಸ್ವಯಂಜಾಗೃತಿ ಅಥವಾ ಅರಿವು ಇರಬೇಕು. ಈ ಅರಿವನ್ನು ತೀರ್ಪು ಸೀಮಿತಗೊಳಿಸಿ ಬಿಡುತ್ತದೆ.

ಗ್ರಹಿಕೆಯ ಸ್ಪಷ್ಟತೆಯನ್ನುಂಟು ಮಾಡಲು, ವ್ಯವಸ್ಥೆಯಿರಬೇಕು, ಇಂದ್ರಿಯ ಜನ್ಯ, ಭಾವನಾತ್ಮಕ, ಬೌದ್ಧಿಕ, ದೈಹಿಕ, ಆದರ್ಶ, ವೈಚಾರಿಕ - ಹೀಗೆ ವಿಭಿನ್ನ ಮಜಲುಗಳಲ್ಲಿ ಪ್ರಜ್ಞೆಯ ಬಗೆಗೆ ತಿಳಿವಳಿಕೆ ಬೇಕು. ಪ್ರಜ್ಞೆಯ ಪ್ರತಿಯೊಂದು ಅಂಶವೂ 'ಪ್ರತ್ಯೇಕ'ವಾಗಿದ್ದರೂ ಒಂದಕ್ಕೊಂದು ಸಂಬಂಧ ಹೊಂದಿದೆ. ಪ್ರತಿಯೊಂದರಲ್ಲೂ ಸ್ಪಷ್ಟತೆಯನ್ನು ಅಳವಡಿಸುವ ಅಗತ್ಯವಿದೆ. ಪ್ರತಿಯೊಂದು ವಿಚಾರ-ಭಾವ ಉದಿಸಿದಂತೆ, ಅದನ್ನು ಅನುಸರಿಸಿ, ಅದನ್ನು ಭಾವಿಸಿ - ವಿಚಾರ ಮಾಡಿ. ಪ್ರತಿಯೊಂದು ಇಂಥ ಸ್ಪಷ್ಟತೆಯ ಜೊತೆಗೆ ಅರಿವು ತೀವ್ರಗೊಂಡು ತೀಕ್ಷ್ಣಗೊಳ್ಳುತ್ತದೆ. ಹೀಗೆ ಪ್ರತಿಯೊಂದು ವಿಚಾರ-ಭಾವದ ಜೊತೆ ಅರಿವು ಸರ್ವವ್ಯಾಪಿಯೂ ಸಕಲವನ್ನೂ ಒಳಗೊಳ್ಳುವಂಥದ್ದೂ ಆಗುತ್ತದೆ. ಅನುಭವದ ಜೊತೆ ಹೊಮ್ಮುವ ವಿಚಾರ ಭಾವನೆಗಳ ಸುಳಿವುಗಳು ಕಂಡುಬರುತ್ತವೆ. ನಾವು ಬೇರೆ ಯಾವುದಕ್ಕೋ ಗಮನ ಕೊಟ್ಟಾಗ, ವಿಚಾರ ಭಾವಗಳ ಚಂಚಲತೆ ದಾಖಲಾಗುತ್ತದೆ. ನಮ್ಮ ಗಮನ ಮತ್ತೆ ಕೇಂದ್ರೀಕೃತವಾದಾಗ ಮತ್ತೆ ಅವು ಪ್ರಕ್ಷೇಪಿಸಲ್ಪಡುತ್ತವೆ.

> "ಮನುಷ್ಯ ಕೇವಲ ಒಳ್ಳೆಯತನದಲ್ಲಿ ಅರಳಿಕೊಂಡಾಗ ಮಾತ್ರ ಹೊಸ ಪ್ರಜ್ಞೆಯ ಅವತರಣ ಸಾಧ್ಯ."
>
> - ಜೆ. ಕೃಷ್ಣಮೂರ್ತಿ

ವ್ಯಾಪಕವಾದ ಸ್ಪಷ್ಟತೆ ಹಾಗೂ ತಿಳಿವಿನ ಮೂಲಕ ಮನಸ್ಸು ಗಾಢವಾದ ಅರಿವಿನಲ್ಲಿ ನಿಶ್ಚಲವಾಗುತ್ತದೆ. ಈ ಮೌನ ಅರಿವಿನಲ್ಲಿ, ಯಾವುದೇ ಪ್ರಭಾವದ, ಹಪಹಪಿಕೆಯ ಪರಿಣಾಮವಲ್ಲದ ನಿಷ್ಕಾರಣ ಭಾವ ವ್ಯಕ್ತವಾಗುತ್ತದೆ. ಈ ಭಾವನೆ, ಸಂತೋಷ, ಪರಮಾನಂದ ಮೂಡುತ್ತಿರುವ ಹಾಗೆಯೆ, ಮನಸ್ಸು ಅದರ ಮೇಲೆ ನೆಗೆದು, ಅದನ್ನು ಸಂಗ್ರಹಿಸಿಡಲು ಯತ್ನಿಸುತ್ತದೆ; "ಈ ಹೊಸ ಸಂತೋಷ ಎಷ್ಟು ಆನಂದದಾಯಕವಿದೆ" ಎಂದು ಅದು ತನಗೆ ತಾನೇ ಹೇಳಿಕೊಳ್ಳುತ್ತದೆ. ಹೀಗೆ ಅದರ ರುಚಿ ನೋಡುತ್ತಾ, ಅದನ್ನು ಭೋಗಿಸುತ್ತಾ ಈ ಪರಮಾನಂದ ಸ್ಮೃತಿಯಲ್ಲಿ ಸಂಗ್ರಹವಾಗುತ್ತದೆ. ಮುಂದೆ ಸುಖ ಪಡಲಿಕ್ಕಾಗಿ ಅದು ಸ್ಮೃತಿಯಲ್ಲಿ ಉಳಿಯುತ್ತದೆ. ಹೀಗಾಗಿ ಈ ಜೀವಂತ ವಾಸ್ತವದ ಅಗಾಧ ಭಾವನೆ ಕಳೆದುಹೋಗುತ್ತದೆ. ಏಕೆಂದರೆ ಮನಸ್ಸು ಸ್ಮೃತಿಗೆ, ಮೃತಕ್ಕೆ ಹಾಗೂ ಖಾಲಿತನಕ್ಕೆ ಅಂಟಿಕೊಂಡಿರುತ್ತದೆ. ಮತ್ತೆ ಪುನಃ ಒಂದು ಅನುಭವಕ್ಕೆ ಅಂಟಿಕೊಳ್ಳುವ ಈ ಹಪಾಹಪಿ, ಅಭ್ಯಾಸ, ಆಸರೆ, ಭದ್ರತೆ, ಅದರ ಬಗ್ಗೆ ಸ್ಪಷ್ಟತೆ ಹಾಗೂ ತಿಳಿವು ಅದನ್ನು ಅನುಸರಿಸುವ ಮೂಲಕ ಮೂಡಬೇಕು. ಅಂದರೆ ಪ್ರಮಾಣಾತೀತ ಮೌನದ ಬಗೆಗಿನ ಅರಿವನ್ನು ಇನ್ನಷ್ಟು ಗಾಢವಾಗಿ ತಿಳಿಯುವ ಮೂಲಕ ಪಡೆಯಬೇಕು. ಈ ಮೌನದಲ್ಲಿ ಪ್ರಮಾಣಾತೀತ ನಿಜದ ಬಗೆಗಿನ ಪ್ರೇಮವಿದೆ. ಈ ಅರಿವು, ಈ ಜಾಗೃತಿ, ಈ ಪ್ರಜ್ಞೆ ಪರಮ ಇಂದ್ರಿಯ ಹಾಗೂ ಪರಮ ವೈಚಾರಿಕ.

ಮರಗಳನ್ನು ಸಂರಕ್ಷಿಸಿರಿ ಮತ್ತು ಇ-ಮೇಲ್ ವಿಳಾಸ ತಿಳಿಸಿರಿ

ಕಾಗದದ ಬಳಕೆಯಿಂದ ಮರಗಳ ನಾಶವಾಗುತ್ತಿರುವುದು ತಿಳಿದ ವಿಷಯ. ಕಾರಣ ಕಾಗದದ ಬಳಕೆಯನ್ನು ಆದಷ್ಟು ಕಡಿಮೆ ಮಾಡುವ ದಿಸೆಯಲ್ಲಿ ನಮ್ಮ 'ಸಹಪಯಣ' ತ್ರೈಮಾಸಿಕ ಪತ್ರಿಕೆಯನ್ನು 'ಕಂಪ್ಯೂಟರ್' ಮುಖಾಂತರ ವಾಚಕರಿಗೆ ತಲುಪಿಸುವ ಉದ್ದೇಶವಿದೆ. ಕಾರಣ ನಮ್ಮ ಎಲ್ಲ 'ಸಹಪಯಣ' ವಾಚಕರು, ತಮ್ಮ ಇ-ಮೇಲ್ (e-mail) ವಿಳಾಸವನ್ನು ತಿಳಿಸಿದಲ್ಲಿ ಅವರಿಗೆಲ್ಲ 'ಇ-ಮೇಲ್' ಮುಖಾಂತರ ನಮ್ಮ ಸಂಚಿಕೆಯನ್ನು ಕಳಿಸಲಾಗುವುದು. ಕಾರಣ 'ಇ-ಮೇಲ್' ವಿಳಾಸ ಉಳ್ಳವರು ಕೂಡಲೇ ತಿಳಿಸಬೇಕಾಗಿ ಬಿನ್ನಹ, ಹಾಗೆಯೇ, 'ಇ-ಮೇಲ್' ವಿಳಾಸ ಇಲ್ಲದವರು ಆ ರೀತಿ ತಿಳಿಸಿದಲ್ಲಿ, ಅವರಿಗೆ ಮೊದಲಿನಂತೆ ಮುದ್ರಿತ ಪ್ರತಿಯನ್ನು ಟಪಾಲು ಮೂಲಕ ಕಳಿಸಲಾಗುವುದು.

'ನಾನು' ಮತ್ತು 'ನನ್ನದು'

ಭೂತ, ವರ್ತಮಾನ ಮತ್ತು ಭವಿಷ್ಯ – ಕಾಲದ ಕರ್ತೃವನ್ನು ನಾವು ಮೊದಲು ಅರಿಯಬೇಕು. ಏಕೆಂದರೆ ಕಾಲವೇ ಹುಟ್ಟು ಸಾವು. ಕಾಲದ ಪ್ರಜ್ಞೆಯು ಸಾತತ್ಯವನ್ನು, ಚಿರಂತನತೆಯನ್ನು ಸೃಷ್ಟಿಸುತ್ತದೆ. ಆದರೆ ಅದು ಸಾರ್ವಕಾಲಿಕವಲ್ಲ; ಕಾಲರಹಿತವೂ ಅಲ್ಲ.

ಕಾಲದ ಕರ್ತನೇ ಸ್ವ, ನನ್ನ ಆಸ್ತಿ, ನನ್ನ ಮಗ, ನನ್ನ ಅಧಿಕಾರ, ನನ್ನ ಯಶಸ್ಸು, ನನ್ನ ಅನುಭವ, ನನ್ನ ಅಮರ್ತ್ಯತೆ ಎಂಬಿತ್ಯಾದಿಗಳ 'ನಾನು' ಮತ್ತು 'ನನ್ನದು'ರ ಪ್ರಜ್ಞೆ. ತನ್ನ ಸ್ಥಿತಿಯ ಬಗೆಗಿನ ಕಳಕಳಿಯೇ ಕಾಲವನ್ನು ಸೃಷ್ಟಿಸುತ್ತದೆ. ಅಜ್ಞಾನ ಮತ್ತು ದುಃಖಕ್ಕೆ ಸ್ವ ಕಾರಣ. ಕಾಮನೆ, ಅಧಿಕಾರದಾಹ, ಸಂಪತ್ತು, ಕೀರ್ತಿ ಇದೆಲ್ಲ ಅದರ ಕಾರ್ಯ ಕಾರಣ. ತನ್ನ ಗತಕಾಲದ ನೆನಪುಗಳೊಂದಿಗೆ, ವರ್ತಮಾನದ ಪ್ರತಿಜ್ಞೆಗಳೊಂದಿಗೆ, ಭವಿಷ್ಯದ ನಿರ್ಧಾರಗಳೊಂದಿಗೆ ಸ್ವ ಎಂಬುದು ಕಾಮನೆಯ ಮೂಲಕ ಸಂಘಟಿತವಾಗಿದೆ. ಹೀಗಾಗಿ ಭವಿಷ್ಯವು ಕಾಮಪಿಪಾಸೆಯ ಒಂದು ರೂಪವಾಗಿ, ವರ್ತಮಾನವು ಭವಿಷ್ಯಕ್ಕೆ ದಾಟುವ ದಾರಿಯಾಗಿ ಮತ್ತು ಗತವು ಚಲನಶೀಲ ಪ್ರೇರಣೆಯಾಗಿ ರೂಪಿತವಾಗುತ್ತದೆ. ಚಕ್ರದೊಳಗೊಂದು ಚಕ್ರ. ಸ್ವ ತಾನೇ ಒಂದು ಚಕ್ರವಾಗಿ ನೋವು ನಲಿವಿನ, ಸುಖ ದುಃಖಗಳ, ಪ್ರೀತಿ ದ್ವೇಷಗಳ, ಗಾಂಭೀರ್ಯ ಹಾಗೂ ನಿಷ್ಕರುಣೆಗಳ ಚಕ್ರದೊಳಗಿರುವುದು. ತನ್ನದೇ ಅನಿಶ್ಚಿತತೆಗಳಿಗಾಗಿ, ಸ್ವಲಾಭಕ್ಕಾಗಿ, ಸ್ವಂತ ಪ್ರಯೋಜನಕ್ಕಾಗಿ ವಿರುದ್ಧಗಳನ್ನು ಸೃಷ್ಟಿಸಲಾಗುತ್ತದೆ. ಇದೇ ನನ್ನ ಹುಟ್ಟು ಹಾಗೂ ಸಾವಿಗೆ ಕಾರಣ. ಕಾಮನೆಯ ಬಲದಿಂದ, 'ಸ್ವ'ದ ಬಲದಿಂದ ವಿಚಾರವನ್ನು ಮಸುಕು ಮಾಡಲಾಗುತ್ತದೆ. ಆದರೆ ಯಾತನೆ ಹಾಗೂ ದುಃಖ ವಿಚಾರವನ್ನು ಎಚ್ಚರಗೊಳಿಸುವ ಕೆಲಸ ಮಾಡುತ್ತವೆ; ಈ ಎಚ್ಚರ ಹಾಗೆಯೇ ಉಳಿಯದಿದ್ದರೆ ವಿಚಾರವು ಸುಖ ಕೊಡುವ ನಂಬಿಕೆಗಳಿಗೆ, ವೈಯಕ್ತಿಕ ಭ್ರಮೆಗಳಿಗೆ ಮತ್ತು ಭರವಸೆಗಳ ಲೋಕಕ್ಕೆ ಜಾರುತ್ತದೆ.

ನಿಧಾನವಾಗಿ ಎಚ್ಚರಗೊಳ್ಳುವ ವಿಚಾರವು ಸಾವಕಾಶವಾಗಿ ದುಃಖದ ಕಾರಣವನ್ನು ಅಧ್ಯಯನ ಮಾಡಹೊರಟು ಅದನ್ನು ಗ್ರಹಿಸಲು ಶುರು ಮಾಡಿದಾಗ ಇದರಲ್ಲಿ ಗ್ರಹಿಕೆಯ ಸಂಕಲ್ಪ ಬಲವೊಂದಿದೆ ಎಂಬುದು ತಿಳಿಯುತ್ತದೆ. ಈ ಗ್ರಹಿಕೆಯ ಸಂಕಲ್ಪ ಬಲವು ವೈಯಕ್ತಿಕವಲ್ಲ; ಅದಕ್ಕೆ ದೇಶ, ಧರ್ಮ ಹಾಗೂ ಜನರ ಹಂಗಿಲ್ಲ. ಈ ಸಂಕಲ್ಪ ಬಲವೇ ಕಾಲರಾಹಿತ್ಯಕ್ಕೆ, ಶಾಶ್ವತಕ್ಕೆ ಬಾಗಿಲು ತೆರೆಯುತ್ತದೆ.

> "ಭೀಶಕ್ತಿ ಪರಂಪರಾಗತವಲ್ಲ,
> ಆದರೆ ಪ್ರಜ್ಞೆ ಪರಂಪರಾಗತ."
>
> – ಜೆ. ಕೃಷ್ಣಮೂರ್ತಿ

ಕಾಮನೆಯ ಜಾಲದಲ್ಲಿ ಸಿಲುಕಿಕೊಂಡ 'ಸ್ವ'ದ ಅಧ್ಯಯನವು ಸರಿಯಾದ ಚಿಂತನೆಯ ಆರಂಭ. ಅಮರತ್ವದ ಹಪಾಹಪಿಯಿಂದ ಈ ಸ್ವದ ಸಾತತ್ಯವನ್ನು ಸೃಷ್ಟಿಸುತ್ತದೆ; ಆದರೆ ಎಂದೆಂದಿಗೂ ಮುಗಿಯದ ನೋವು, ಯಾತನೆ, ದುಃಖ, 'ನಾನು' ಹಾಗೂ 'ನನ್ನದು' ಎಂಬ ಸಂಘರ್ಷ ಇದರೊಂದಿಗೇ ಜೊತೆಯಾಗಿ ಬರುತ್ತದೆ. ಇದಕ್ಕೆ ಕೊನೆಯೇ ಇಲ್ಲ. ಗ್ರಹಿಕೆಯ ಸಂಕಲ್ಪ ಬಲವೊಂದೇ ದುಃಖದ ಕಾರಣವನ್ನು ಪರಿಹರಿಸಬಲ್ಲುದು.

ಕಾಮನೆಯ ಗತಿಯ ಬಗ್ಗೆ ಎಚ್ಚರವಿರಲಿ; ಈ ಎಚ್ಚರದಲ್ಲಿ ಸರಿಯಾದ ಚಿಂತನೆ ಅರಳುತ್ತದೆ. ಸ್ವ ಕಾಮನೆ ಸೃಷ್ಟಿಸುವ ಅನಿಶ್ಚಿತತೆಯ ಬಗೆಗಿನ ಅನುಭೂತಿಗಾಗಿ 'ನಾನು' ಮತ್ತು 'ನನ್ನದು' ಗಳ ಜಾಲದಿಂದ ಸ್ವ ವಿಚಾರವನ್ನು ಬಿಡಿಸಿಕೊಂಬುದೇ ಸದ್ಗುಣ. ❐

ಅಧ್ಯಯನ ಶಿಬಿರ – 2020–21

ಜೂನ್	11–14, 2020:	ಸಂಬಂಧಗಳಲ್ಲಿ ಸಾಮರಸ್ಯದ ಅನ್ವೇಷಣೆ
ಜುಲೈ	9–14, 2020:	"ಜವಾಬ್ದಾರಿಯುತ ಪೋಷಕರಾಗಿರುವುದು" ಎಂದರೇನು?
ಆಗಸ್ಟ್	6–9, 2020:	ಒತ್ತಡ, ಆತಂಕ, ಚಿಂತೆ ಮತ್ತು ಸಂಘರ್ಷವನ್ನು ನಿಭಾಯಿಸುವುದು
ಸೆಪ್ಟೆಂಬರ್	10–13, 2020:	"ಸಮಗ್ರ ಶಿಕ್ಷಣ" ಎಂದರೇನು?
ಅಕ್ಟೋಬರ್	8–11, 2020:	ಭಾವನೆಗಳು – ವ್ಯಕ್ತಪಡಿಸುವಿಕೆ, ನಿಗ್ರಹ, ನಿಯಂತ್ರಣ? ಅಥವಾ ಬೇರೆ ದಾರಿ ಇದೆಯೇ?
ನವೆಂಬರ್	5–8, 2020:	ನಿಮ್ಮ "ಆರಾಮದಾಯಕ ವಲಯ"ದಿಂದ ಹೊರಬರುವುದು – ಬದಲಾವಣೆಯನ್ನು ನಾನು ಏಕೆ ವಿರೋಧಿಸುತ್ತೇನೆ?
ಡಿಸೆಂಬರ್	10–13, 2020:	"ಬದುಕುವ ಕಲೆ"ಯನ್ನು ಅನ್ವೇಷಿಸುವುದು
ಜನವರಿ	14–17, 2021:	ಈಗ ದೈನಂದಿನ ಜೀವನದಲ್ಲಿ ವಾಸಿಸುವ ಮಹತ್ವ
ಫೆಬ್ರವರಿ	11–14, 2021:	ನಿಮ್ಮ ತಲೆಯಲ್ಲಿರುವ ಹುಚ್ಚುತನದ ಗದ್ದಲವನ್ನು ಹಾಗೂ ಮನಸ್ಸು ಎಂದದಾರೂ ಮೌನದಿಂದಿರಲು ಸಾಧ್ಯವೇ ಎಂಬುದನ್ನು ಅನ್ವೇಷಿಸುವುದು
ಮಾರ್ಚ್	11–14, 2021:	ಆನಂದ ಮತ್ತು "ತೃಪ್ತಿಯ ಬೆನ್ನಟ್ಟುವ" ಅನ್ವೇಷಣೆ
ಏಪ್ರಿಲ್	8–11, 2021:	ಕರ್ನಾಟಕ ಜೆ.ಕೆ ಅಧ್ಯಯನ ಶಿಬಿರ: ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು (ಕನ್ನಡ ಮತ್ತು ಇಂಗ್ಲೀಷಿನಲ್ಲಿ)

*** ಯಾವುದೇ ಸಾಮಾಜಿಕ – ಸಾಂಕ್ರಾಮಿಕ ಕಾರಣಗಳಿಂದ ಪ್ರಕಟಿತ ಶಿಬಿರ ನಡೆಸಲು ಸಾಧ್ಯವಾಗದಾದಲ್ಲಿ, ಶಿಬಿರಾರ್ಥಿಗಳಿಗೆ ವೈಯಕ್ತಿಕವಾಗಿ ಸೂಚಿಸಲಾಗುವುದು.**

ಸಹಜ ಪ್ರವೃತ್ತಿ ಮತ್ತು ಅನುಬಂಧನದ ನಡುವಿನ ಸಂಘರ್ಷ

ಕೆಲವು ವರ್ಷಗಳಿಂದ ಈಚೆಗೆ ಅಂತರಂಗದ ದನಿಯೊಂದು ತನ್ನನ್ನು ನಿರ್ದೇಶಿಸುತ್ತಿರುವುದು ಏಕೆ ಎಂಬುದನ್ನು ತಿಳಿಯುವ ಆಸೆ 'ಕೆ.ಜೆ.'ಗೆ. ಈ ದನಿ ಆಕೆಯ ಬದುಕನ್ನು ಸಂಪೂರ್ಣವಾಗಿ ಪರಿವರ್ತಿಸಿ ರೂಪಿಸಿದೆ. ಅದೇ ದನಿಯಿಂದ ಪ್ರೇರಣೆಗೊಂಡು ಆಕೆ ನಮ್ಮನ್ನು ನೋಡಲು ಬಂದಿದ್ದಳು. ತನ್ನೆಲ್ಲ ವಿಚಾರ, ಭಾವನೆ, ಕ್ರಿಯೆಗಳ ಸಲುವಾಗಿ ಆಕೆ ಆ ದನಿಯನ್ನು ಅವಲಂಬಿಸಿದ್ದಳು. ಆ ದನಿ ಹೇಳಿದಂತೆ ನಡೆದುಕೊಳ್ಳುತ್ತಿದ್ದಳು. ನಮ್ಮನ್ನು ನೋಡಿದ ಮೇಲೆ ದನಿ ನಿಂತು ಹೋಗುತ್ತದೆ ಎಂದು ಹೇಳಿದಳು. ಆ ಪ್ರಕಾರ ಹಿಂದೊಮ್ಮೆ ಆಕೆ ಇಲ್ಲಿಗೆ ಬಂದಿದ್ದಳು, ಮತ್ತೆ ಬಂದಿದ್ದಾಳೆ. ಈಗ ದನಿಯಿಲ್ಲ. ಏನು ಆ ದನಿ? ಅದು ನಿಜವೇ? ಅದೇನು ಆಕೆಯಲ್ಲಿ ಆವಾಹನೆಯಾಗಿರುವ ದೈವವೆ? ಆಕೆಯಲ್ಲಿ ಏಕೀ ದ್ವಂದ್ವ?

> "ನಾವು ಪ್ರಕೃತಿಯೊಂದಿಗಿನ ಆಳವಾದ ಆತ್ಮೀಯ ಸಂಬಂಧವನ್ನು ಕಳೆದುಕೊಂಡಾಗ, ಮಂದಿರಗಳು, ಮಸೀದಿಗಳು, ಚರ್ಚುಗಳು ಮುಖ್ಯವಾಗುತ್ತವೆ."
>
> – ಜೆ. ಕೃಷ್ಣಮೂರ್ತಿ

ಪ್ರತಿಯೊಬ್ಬರಲ್ಲೂ ಈ ದ್ವಂದ್ವ ವಾದ ಇಲ್ಲವೆ? ಪರಮಾತ್ಮ, ಜೀವಾತ್ಮ, ಉತ್ತಮ–ಅಧಮ, ಸತ್ಯ–ಮಿಥ್ಯ ಹೀಗೆ ಜನ ಬೇರೆಬೇರೆ ಶಬ್ದಗಳನ್ನು ಹಣೆಪಟ್ಟಿಗಳನ್ನು ಬಳಸಬಹುದು. ಆದರೆ ಮೂಲತಃ ಇದು ವಿರುದ್ಧಗಳ ನಡುವಣ ಸಂಘರ್ಷ. ಈ ಸಂಘರ್ಷವು ವಿವಿಧ ರೂಪಗಳನ್ನು ತಳೆದು ಬಗೆಬಗೆಯ ವೈಚಿತ್ರ್ಯಗಳನ್ನು, ಒಲವುಗಳನ್ನು ಸೃಷ್ಟಿಸುತ್ತದೆ. ಅಂದರೆ ಪ್ರವೃತ್ತಿ ಹಾಗೂ ಅನುಬಂಧನ, ಅಂತಸ್ಥ ಮತ್ತು ಆರ್ಜಿತ, ಅಂತರಂಗ ಮತ್ತು ಬಹಿರಂಗ ಇವುಗಳ ನಡುವೆ ಸಂಘರ್ಷವನ್ನು ಉಂಟುಮಾಡುತ್ತದೆ. ಈ ಸಂಘರ್ಷವು ವೇದನಾಮಯ, ವಿಘಟನಕಾರಿ; ಹೀಗಾಗಿ ಅದು ಪರಿಹಾರವಾಗಬೇಕು; ಇಲ್ಲವಾದರೆ ಶಾಂತಿ ನೆಲೆನಿಲ್ಲದು, ಸೃಜನಾತ್ಮಕ ಆನಂದ ದೊರೆಯದು. ಅಂತರಂಗವು ಸಂಕಷ್ಟದ ತೀವ್ರತೆ ಅನುಸರಿಸಿ ಕನಸುಗಳ ಮೂಲಕ, ಎಚ್ಚರಿಕೆಗಳ ಮೂಲಕ, ದನಿಗಳ ಮೂಲಕ ಸೂಚನೆಗಳನ್ನು ಕೊಡುತ್ತದೆ. ದನಿಗಳು, ಕನಸುಗಳು, ಸೂಚನೆಗಳು ಎಲ್ಲ ನಮ್ಮಿಂದಲೆ ಹೊಮ್ಮಿವೆ. ನಾವೇ ವಿರೋಧಿಗಳು; ನಾವೇ ಅಂತರಂಗ–ಬಹಿರಂಗ, ಅನುಬಂಧನ ಮತ್ತು ಪ್ರವೃತ್ತಿ. ಕೇಳುವ ದನಿಯು ಪರಮಾತ್ಮನದ್ದು ಎಂದು ಯೋಚಿಸುತ್ತಾ ಭ್ರಮಿಸುತ್ತೇವೆ. ದನಿ ನಮ್ಮ ಮುಖಸ್ತುತಿ ಮಾಡುತ್ತದೆ, ನಮಗೆ ಮಹತ್ತ್ವ ನೀಡುತ್ತದೆ, ಆದರೆ ಮುಖ್ಯ ಸಮಸ್ಯೆ ಪರಿಹಾರವಾಗದೆ ಉಳಿದಿದೆ. ನಾವು ನಮಗೆ ತೃಪ್ತಿ ನೀಡುವ ಯಾವುದೇ ಭ್ರಮೆಗೆ ಬಲಿಯಾಗದೆ ಮುಖ್ಯ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಬೇಕು; ತೃಪ್ತಿದಾಯಕ ಭ್ರಮೆಗೆ ಅಂಟಿಕೊಳ್ಳಬಾರದು. ಆ ದನಿಯನ್ನು ನಾವು ಅವಲಂಬಿಸಬಾರದು. ಏಕೆಂದರೆ ಅದು ಭಯಕಾರಕ. ನಮ್ಮ ಆತ್ಮವಿಶ್ವಾಸವನ್ನು ಕುಂಠಿತಗೊಳಿಸುತ್ತದೆ. ನಿಜವಾದ ಆತ್ಮವಿಶ್ವಾಸವೆಂದರೆ ಆಕ್ರಮಣಶೀಲತೆ, ಸ್ಪರ್ಧಾತ್ಮಕತೆ ಅಲ್ಲದ್ದು.

ಅನೇಕ ಪ್ರಜ್ಞಾವಂತರಿಗೆ ಒಳಿತು ಮತ್ತು ಕೆಡುಕಿನ ಅರಿವಿದೆ. ಪ್ರವೃತ್ತಿಯಿಂದಲೇ ನಮಗೆ ತಿಳಿದಿದೆ, 'ಏನೋ ಒಂದು' ನಮಗೆ ಒಂದಿಷ್ಟು ಮಾಹಿತಿ ನೀಡುತ್ತದೆ. ಆದರೆ ಅನುಬಂಧನ, ಬಹಿರಂಗ ತುಂಬ ಪ್ರಬಲವಾಗಿದೆ. ಅದು ಬೇಡಿಕೆಗಳನ್ನು ಒಡ್ಡುತ್ತಲೇ ಇರುತ್ತದೆ. ಬೇಡಿಕೆಗಳ ಈಡೇರಿಕೆಗಾಗಿ ಗದ್ದಲವೆಬ್ಬಿಸುತ್ತದೆ. ನಾವು ಅದಕ್ಕೆ ಶರಣಾಗುತ್ತೇವೆ. ಬಹಿರಂಗ – ಅದೇ ಅನುಬಂಧನ ಎಂಬುದನ್ನು ನಾವು ನಮ್ಮ ಲೋಲುಪತೆ, ದುಷ್ಟಬುದ್ಧಿ ಮತ್ತು ಅಜ್ಞಾನದಿಂದ ಸೃಷ್ಟಿ ಮಾಡಿದ್ದೇವೆ; ಅದರಂತೆಯೇ ನಾವು ಅಂತರಂಗ–ಅಂದರೆ ಪ್ರವೃತ್ತಿಯನ್ನು ಸೃಷ್ಟಿಸಿದ್ದೇವೆ. ನಾವು ವಿಚಾರ ಮತ್ತು ವಿಚಾರಜೀವಿ ಎರಡೂ ಹೌದು. ನಾವು ನಮ್ಮನ್ನು ಒಂದರ ಜೊತೆ ಗುರುತಿಸಿಕೊಂಡು

ಈ ವಾರ್ತಾಪತ್ರದ ಸಂಚಿಕೆಗಳನ್ನು ನಿಯಮಿತವಾಗಿ ಪಡೆಯಲಿಚ್ಛಿಸುವವರು ತಮ್ಮ ಹಾಗೂ ಇತರ ಆಸಕ್ತ ಸ್ನೇಹಿತರ ವಿಳಾಸಗಳನ್ನು (ಪಿನ್ ಕೋಡ್ ಮತ್ತು ಈ-ಮೇಲ್ ಸಹಿತ) ಈ ಕೆಳಗೆ ಭರ್ತಿ ಮಾಡಿ ಕೊನೆಯ ಪುಟದಲ್ಲಿರುವ ವಿಳಾಸಕ್ಕೆ ಬರೆಯಿರಿ.

1

2

ಕನ್ನಡ ಭಾಷಾಂತರ ಸಮಿತಿ ಸದಸ್ಯರು

ಪ್ರೊ॥ ಓ.ಎಲ್. ನಾಗಭೂಷಣ ಸ್ವಾಮಿ, ಡಾ॥ ವನಮಾಲಾ ವಿಶ್ವನಾಥ್

ಡಾ॥ ಎಚ್.ಎಸ್. ರಾಘವೇಂದ್ರರಾವ್

ಶ್ರೀ ಕೆ.ಜಿ. ಕುಲಕರ್ಣಿ, ಶ್ರೀಮತಿ ಸ್ವಪ್ನಾ ಸಂತೋಷ್

ಇನ್ನೊಂದನ್ನು ಅಲ್ಲಗಳೆಯುತ್ತೇವೆ. ಈ ಗುರುತಿಸುವಿಕೆ ಹಾಗೂ ನಿರಾಕರಣಗಳು ಸಂಘರ್ಷವನ್ನು ಅರ್ಥಮಾಡಿಕೊಳ್ಳಲು ಬಾಧಕಗಳು. ಚಿಂತಕ ಹಾಗೂ ಆತನ ಚಿಂತನೆಯ ಸಂಕೀರ್ಣ ಸ್ವರೂಪವನ್ನು ನಾವು ಅರ್ಥಮಾಡಿಕೊಳ್ಳಬೇಕು. ಎರಡೂ ಬೇರೇನಾ? ವಿಚಾರವನ್ನು ಅಧ್ಯಯನ ಮಾಡುವಾಗ, ವಿಚಾರಜೀವಿ ಅನಾವರಣಗೊಳ್ಳುವುದಿಲ್ಲವೆ? ಈ ಸಂಕೀರ್ಣ ಸಂರಚನೆ ಎಂದರೆ ಚಿಂತಕ–ಚಿಂತನೆ ಎರಡೂ ಅಲ್ಲವೆ? ಒಂದನ್ನು ಹೊರತುಪಡಿಸಿ ಇನ್ನೊಂದಿಲ್ಲ. ಒಟ್ಟು ಸಂರಚನೆಯೇ ಸ್ವ; ಚಿಂತಕ ಹಾಗೂ ಆತನ ಚಿಂತನೆ, ಪರಮಾತ್ಮ ಮತ್ತು ಜೀವಾತ್ಮ, ಅಸಂಖ್ಯ ವಿಭಜನೆಗಳು ಮತ್ತು ಉಪ ವಿಭಜನೆಗಳು. ವರ್ತಮಾನ ಹಾಗೂ ಗತಕಾಲದಲ್ಲಿನ ಹಪಾಹಪಿಯ ಫಲ ಸ್ವರೂಪವಾದ ಸ್ವ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ದ್ವಂದ್ವ 'ನಾನು' ಮತ್ತು 'ನಾನಲ್ಲ' ವಿರುದ್ಧಗಳ ನಡುವಿನ ಸಂಘರ್ಷ ಇರಲೇಬೇಕು. ಈ ಹಪಾಹಪಿ ಭೋಗ ಸ್ವರೂಪಿಯಾದ, ಲೌಕಿಕವಾದ ಅಥವಾ ಸಮೃದ್ಧಿಕರ ಮತ್ತು ವೈಯಕ್ತಿಕ ಚಿರಂತನತೆ – ಹೀಗೆ ಹಲವು ಸೂಕ್ಷ್ಮ ಅಥವಾ ಒಡ್ಡಾದ ರೂಪಗಳನ್ನು ತಳೆಯುತ್ತದೆ.

ಪ್ರತಿಯೊಂದು ಚಿಂತನೆ–ಭಾವನೆಯ ಸತತ ಜಾಗೃತಿಯ ಮೂಲಕ; ಪ್ರತಿ ವಿಚಾರ ಭಾವನೆಯನ್ನು ತೀವ್ರವಾಗಿ ಅನುಭವಿಸುವ ಮೂಲಕ, ಹಪಾಹಪಿ ಮತ್ತು ಅದರ ಸದಾ ಜ್ವಲಂತ ಸಂಘರ್ಷ ಅವನ್ನು ಕೊನೆಗೊಳಿಸಬಹುದು. ಗುರುತಿಸಿಕೊಳ್ಳುವಿಕೆ–ಸ್ವೀಕಾರ ಅಥವಾ ನಿರಾಕರಣ–ಚಿಂತನ–ಭಾವನೆಯ ಪರಿಪೂರ್ಣತೆಗೆ ಅಡ್ಡಿ. ಚಿಂತನೆ–ಭಾವನೆಯ ಪರಿಪೂರ್ಣತೆಯಲ್ಲಿ ಹಪಾಹಪಿಯಿಂದ ಬಿಡುಗಡೆಯಿದೆ. ಇಂಥ ಸ್ಥಿತಿಯಲ್ಲಿ ಶಾಂತಿ ಸಂತೋಷಗಳು ಒದಗಲಿವೆ. ❐

"ನಾವು ಜೀವನದ ಪ್ರತಿಯೊಂದನ್ನೂ ಪ್ರಶ್ನಿಸಬೇಕು, ನಮ್ಮ ಉದ್ದ ಕೂದಲು ಅಥವಾ ಗಿಡ್ಡ ಕೂದಲು,
ನಮ್ಮ ಬಟ್ಟೆ, ನಾವು ನಡೆಯುವ ರೀತಿ, ನಾವು ತಿನ್ನುವ ರೀತಿ, ನಾವು ಏನು ಯೋಚಿಸುತ್ತೇವೆ,
ನಾವು ಹೇಗೆ ಭಾವಿಸುತ್ತೇವೆ, ಎಲ್ಲವೂ ಪ್ರಶ್ನಿಸಲ್ಪಡಬೇಕು:

ಆಗ ಮನೋ–ಬುದ್ಧಿಯು ಅಸಾಮಾನ್ಯ ಸಂವೇದನಶೀಲ, ಜೀವಂತ ಹಾಗೂ ಧೀಮಂತವಾಗುತ್ತದೆ.

ಇಂತಹ ಮನಸ್ಸು ಪ್ರೀತಿಸಲು ಶಕ್ತ;
ಇಂತಹ ಮನಸ್ಸು ಮಾತ್ರ ಧಾರ್ಮಿಕ–ಮನಸ್ಸು ಎಂದರೇನು ಎಂದು ಅರಿತಿರುತ್ತದೆ."

– ಜೆ.ಕೃಷ್ಣಮೂರ್ತಿ

ವಿಶೇಷ ಪ್ರಕಟಣೆ :

ಕೃಷ್ಣಮೂರ್ತಿಯವರ ಪ್ರವಚನದ ವೀಡಿಯೋಗಳು ಈಗ ಕನ್ನಡ ಸಬ್ ಟೈಟಲ್ ಜೊತೆಗೆ ಲಭ್ಯ.
J. Krishnamurti - Washington DC 1985 - https://www.youtube.com/watch?v=2fOJ8hMzlJs ಮತ್ತು
https://www.youtube.com/watch?v=D3t5x76aU5k

ಖಾಸಗಿ ಪ್ರಸಾರಕ್ಕಾಗಿ ಮಾತ್ರ
(For private circulation only)

Printed, Published and Owned by:
Director
The Study: Bangalore Education Centre
Krishnamurti Foundation India
Thatguni Post, Bangalore - 560 082.
Tel.: 080 - 28435243, 28435240 Extn. 114
Mob : 9482641389
Email : kfistudy@gmail.com
Website : www.kfistudy.org
Editor : Smt. Sushma Inamdar

Book Packet containing periodicals.
Price : Single copy Rs. 5/-

Book-Post